



## ಡೇವಿಡ್ ಗ್ರಾಸ್‌ಮನ್

ಹೀಬ್ರ್ಯೂ ಭಾಷೆಯ ಪ್ರಸಿದ್ಧ ಕಾದಂಬರಿಕಾರ, ಹೋರಾಟಗಾರ ಮತ್ತು ಚಿಂತಕರಾದ ಡೇವಿಡ್ ಗ್ರಾಸ್‌ಮನ್, 1954 ರಲ್ಲಿ ಜೆರೂಸಲೆಂನಲ್ಲಿ ಹುಟ್ಟಿದರು. ಅವರ ಹಿರಿಯರು ಜನಾಂಗದ್ವೇಷ ಮತ್ತು ಬಡತನವನ್ನು ತೀವ್ರವಾಗಿ ಅನುಭವಿಸಿದವರು. ಗ್ರಾಸ್‌ಮನ್ ತಂದೆ ಮೊದಲು ಬಸ್ ಚಾಲಕರಾಗಿದ್ದು ಆಮೇಲೆ ಲೈಬ್ರರಿಯನ್ ಆದವರು. ಮಗನಿಗೆ ಪುಸ್ತಕಪ್ರೀತಿ ಬಂದಿದ್ದು ಅವರಿಂದಲೇ. ಗ್ರಾಸ್‌ಮನ್ ಹೀಬ್ರ್ಯೂ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಮತ್ತು ರಂಗಭೂಮಿಗಳಲ್ಲಿ ಶಿಕ್ಷಣ ಪಡೆದರು. ಆಕಾಶವಾಣಿಯಲ್ಲಿ ಮೊದಲು ಬಾಲನಟನಾಗಿ, ನಂತರ ಸುಮಾರು ಇಪ್ಪತ್ತೈದು ವರ್ಷಗಳು ಅಧಿಕಾರಿಯಾಗಿ ಕೆಲಸ ಮಾಡಿದರು. ಪ್ಯಾಲೆಸ್ಟೈನ್ ಪರವಾಗಿ ಇರುವರೆಂದು ಅವರನ್ನು ಕೆಲಸದಿಂದ ತೆಗೆಯಲಾಯಿತು. ಇಪ್ಪತ್ತು ವರ್ಷದ ಮಗನನ್ನು ಯುದ್ಧದಲ್ಲಿ ಕಳೆದುಕೊಂಡರು. ಗ್ರಾಸ್‌ಮನ್ ತಮ್ಮ ಎಡಪಂಥೀಯ ಚಿಂತನೆಗಳಿಗಾಗಿ ಪ್ರಸಿದ್ಧರಾದವರು. ಪ್ಯಾಲೆಸ್ಟೈನಿಯನ್ನರ ಪರವಾಗಿ ಹೋರಾಡಿ ಇಸ್ರೇಲೀ ಸರ್ಕಾರವನ್ನು ಎದುರು ಹಾಕಿಕೊಂಡವರು.

ಕಾದಂಬರಿಯು ಗ್ರಾಸ್‌ಮನ್ ಅವರ ಪ್ರೀತಿಯ ಸಾಹಿತ್ಯಪ್ರಕಾರ. 1982ರಿಂದ 2017ರ ಅವಧಿಯಲ್ಲಿ 10 ಕಾದಂಬರಿಗಳನ್ನು ಬರೆದಿದ್ದಾರೆ. ‘Duel’, ‘Smile of the Lamb’, ‘See Under: Love’, ‘The Book of Intimate Grammar’, ‘Be My Knife’ ಮತ್ತು ‘Her Body Knows’ ಅವುಗಳಲ್ಲಿ ಕೆಲವು. ನಮ್ಮ ಕಾಲದಲ್ಲಿ ಕಾದಂಬರಿ ಪ್ರಕಾರದ ಸಾಧ್ಯತೆಗಳನ್ನು ಹಿಗ್ಗಿಸಿದ ಬರಹಗಾರರಲ್ಲಿ ಅವರೂ ಒಬ್ಬರು. ಸಾಹಿತ್ಯ, ರಾಜಕೀಯ ಮತ್ತು ಅನುಭವಕಥನವನ್ನು ಕೇಂದ್ರವಾಗಿ ಹೊಂದಿರುವ ಐದು ಸೃಜನೇತರ ಪುಸ್ತಕಗಳನ್ನೂ ಅವರು ಬರೆದಿದ್ದಾರೆ. ಮ್ಯಾನ್ ಬುಕರ್ ಸೇರಿದಂತೆ ಹತ್ತು ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ದೃಷ್ಟಿಕೋನದಿಂದ ನಿರೂಪಿತವಾಗುತ್ತವೆ. ಅವನು ವಿಕಾರವಾಗಿ ಕಾಣುತ್ತಿರುವ ದೊವಾಲೆಯ ಮುಗ್ಧವೂ ಹಿಂಸಾಮಯವೂ ಆದ ಬಾಲ್ಯವನ್ನು ನಮಗೆ ಪರಿಚಯಿಸುತ್ತಾನೆ; ಮತ್ತೊಂದು ಕಡೆ ಸ್ವತಃ ದೊವಾಲೆ ಹೇಳಿಕೊಳ್ಳುವ ಅನುಭವಗಳು ಆತ್ಮಕಥಾನಕ ಮಾದರಿಯದ್ದಾಗಿವೆ; ದೊವಾಲೆಯ ಬಾಲ್ಯದಲ್ಲಿ ಅವನನ್ನು ನೋಡಿದ್ದ, ಅವನ ಗೆಳೆತನವನ್ನು ಮೆಚ್ಚಿಕೊಂಡಿದ್ದ ‘ಕುಳ್ಳಿ’ಯೊಬ್ಬಳು ಈ ಪ್ರದರ್ಶನಕ್ಕೆ ಬಂದಿದ್ದಾಳೆ. ದೊವಾಲೆಯ ಆತ್ಮಕಥಾನಕದಂತಹ ವಿವರಗಳಲ್ಲಿ ಪ್ರಜ್ಞಾಪೂರ್ವಕವಾಗಿ/ಅಪ್ರಜ್ಞಾಪೂರ್ವಕವಾಗಿ ತೂರಿಕೊಂಡಿರುವ ‘ಸುಳ್ಳು’ ವಿವರಗಳನ್ನು ಅವಳು ನೇರಾನೇರ ವಿರೋಧಿಸುತ್ತಾಳೆ. ಈ ಮೂಲಕ ಕಾದಂಬರಿಯಲ್ಲಿ